ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಧಾರವಾಡ-580001
Deputy Commissioner Office,
Dharwad-580001
e-mail :
deo.dharwad@gmail.com

ಕರ್ನಾಟಕ ಸರ್ಕಾರ
Government of karnataka

ದೂರವಾಣಿ: 0836-2233840,
2233880,
(ಫ್ಯಾಕ್ಸ್) 0836-2747102,
website:
www.dharwad.nic,in

ಕ್ರ.ಸಂ.ಸಿಬ್ಬಂದಿ-3/ಗ್ರಾಲೆನೇ/ವಹಿ-10/2019-20

ದಿನಾಂಕ 31-07-2019

## ಅಧಿಸೂಚನೆ

ವಿಷಯ:- ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ

ಉಲ್ಲೇಖ:-
1 ಸರಕಾರದ ಅಧಿಸೂಚನೆ ಕ್ರ : ಆರ್‌ಡಿ/299/ಬಿಎಸ್‌ಸಿ/2006 ದಿನಾಂಕ 03-02-2009 ಮತ್ತು 24-07-2009
2 ಸರಕಾರದ ಪತ್ರ ಕ್ರ : ಕಂಇ/04/ಬಿಎಸ್‌ಸಿ/2011 ದಿ:25-02-2011
3 ಸರಕಾರದ ಪತ್ರ ಕ್ರ : ಕಂಇ/33/ಡಿಎಸ್‌ಪಿ/2012 ದಿನಾಂಕ 05-06-2012 ಹಾಗೂ 21-06-2012
4 ಸರಕಾರದ ಆದೇಶ ಕ್ರ :666/ಎಎಸ್‌ಡಿ/2012 (ಭಾಗ) ದಿನಾಂಕ 04-07-2013

ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ 22 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬೊರ್ಡಿನೇಟ್ ಬ್ರ್ಯಾಂಚ್) (ಕೇಡರ್ & ರಿಕ್ರೂಟ್‌ಮೆಂಟ್) (ತಿದ್ದುಪಡಿ) ನಿಯಮಗಳು, 2008 ಮತ್ತು 2009 ರನ್ವಯ ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡುವ ಕುರಿತಂತೆ ಉಲ್ಲೇಖ (1) ಮತ್ತು (2) ರಲ್ಲಿ ನೀಡಿದ ಅದೇಶದ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಈ ಕೆಳಗಿನ ಶರತ್ತುಗಳಿಗೆ ಒಳಪಟ್ಟು ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

### 1 ಹುದ್ದೆಗಳ ವಿವರ ಮತ್ತು ವೇತನ ಶ್ರೇಣಿ :

| | | |
|---|---|---|
| (ಎ) ಹುದ್ದೆಯ ಹೆಸರು | : | ಗ್ರಾಮಲೆಕ್ಕಾಧಿಕಾರಿ |
| (ಬಿ) ಹುದ್ದೆಗಳ ಸಂಖ್ಯೆ | : | 22 |
| (ಸಿ) ವೇತನ ಶ್ರೇಣಿ | : | 21400-500-22400-550-24600-600-27000-650-29600-750-32600-850-36000-950-39800-1100-42000 |

2 **ಸನ್ 2019 ನೇ ಸಾಲಿನಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿ ಹುದ್ದೆಗಳ ವರ್ಗೀಕರಣ :**

ಸನ್ 2015ನೇ ಸಾಲಿನ ನೇರ ನೇಮಕಾತಿಯಲ್ಲಿ ಹುದ್ದೆಗಳ ವರ್ಗೀಕರಣದ ರೋಷ್ಟರಿನ ಬಿಂದುವನ್ನು 23ಕ್ಕೆ ಮುಕ್ತಾಯಗೊಳಿಸಿದ್ದು ಅದೆ. ಈಗ ರೋಷ್ಟರಿನ ಪ್ರಾರಂಭಿಕ ಬಿಂದು 24 ರಿಂದ 45 ರವರೆಗೆ ಅದೆ.

| ಕ್ರ. ಸಂ. | ಹುದ್ದೆಯ ಹೆಸರು | ಒಟ್ಟು | ಮೀಸಲಾತಿ ವರ್ಗ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾ. ಸೈ. | ಕ. ಮಾ. ಅ. | ಯೋ. ಅ. | ಅಂ. ವಿ. | ಒಟ್ಟು |
|---|---|---|---|---|---|---|---|---|---|---|---|
| 1 | ಗ್ರಾಮ-ಲೆಕ್ಕಾಧಿಕಾರಿ | 22 | ಪ.ಜಾ | 01 | 01 | – | 01 | – | – | – | 03 |
| | | | ಪ.ಪಂ. | – | 01 | – | – | – | – | – | 01 |
| | | | ಪ್ರ-1 | – | – | 01 | – | – | – | – | 01 |
| | | | ಪ್ರ-2(ಎ) | 02 | 01 | – | 01 | – | – | – | 04 |
| | | | ಪ್ರ-2(ಬಿ) | – | – | 01 | – | – | – | – | 01 |
| | | | ಪ್ರ-3(ಎ) | – | – | – | – | – | – | – | – |
| | | | ಪ್ರ-3(ಬಿ) | 01 | – | – | – | – | – | – | 01 |
| | | | ಸಾ.ಅ | 02 | 04 | 03 | 01 | – | – | 01 | 11 |
| | | | **ಒಟ್ಟು** | **06** | **07** | **05** | **03** | – | – | **01** | **22** |

(1) ಮಾ.ಸೈ. –ಮಾಜಿ ಸೈನಿಕರು
(2) ಕ.ಮಾ.ಅ. – ಕನ್ನಡ ಮಾಧ್ಯಮ ಅಭ್ಯರ್ಥಿ
(3) ಯೋ.ಅ. –ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ
(4) ಅಂ.ವಿ. – ಅಂಗವಿಕಲ ಅಭ್ಯರ್ಥಿ

3 **ಅರ್ಜಿ ಸಲ್ಲಿಸಲು ಕಾಲಾವಕಾಶ :**

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : **05-08-2019**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **04-09-2019**
ಶುಲ್ಕ ಪಾವತಿಸಲು ಕೊನೆಯ ದಿನಾಂಕ : **05-09-2019**

4 **ವಿದ್ಯಾರ್ಹತೆ :** ಕರ್ನಾಟಕ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನಡೆಸುವ **II P.U.C** ಪರೀಕ್ಷೆಯಲ್ಲಿ ತೇರ್ಗಡೆ ಅಥವಾ **C.B.S.E.** ಅಥವಾ **I.C.S.E.** ನಡೆಸುವ 12ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು. ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.

5 **ವಯೋಮಿತಿ:** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

| | | |
|---|---|---|
| (1) | ಪ.ಜಾ/ಪ.ಪಂ/ಪ್ರ ವರ್ಗ-1 | ಕನಿಷ್ಠ 18, ಗರಿಷ್ಠ 40 ವರ್ಷ |
| (2) | ಇತರೆ ಹಿಂದುಳಿದ ವರ್ಗ | ಕನಿಷ್ಠ 18, ಗರಿಷ್ಠ 38 ವರ್ಷ |
| (3) | ಸಾಮಾನ್ಯ ವರ್ಗ | ಕನಿಷ್ಠ 18, ಗರಿಷ್ಠ 35 ವರ್ಷ |

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಸಡಿಲಿಸಲಾಗುವುದು.

(ಎ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು, ಕರ್ನಾಟಕ ರಾಜ್ಯ ಸರಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಮತ್ತು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು

(ಬಿ) ಅಭ್ಯರ್ಥಿಯು ಮಾಜಿ ಸೈನಿಕರಾಗಿದ್ದಲ್ಲಿ ಅವನು/ಅವಳು ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವರೋ ಅಷ್ಟು ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು

(ಸಿ) ಅಭ್ಯರ್ಥಿಯು ಅಂಗವಿಕಲನಾ/ಳಾಗಿದ್ದರೆ 10 ವರ್ಷಗಳು

(ಡಿ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು

(ಇ) ಪೂರ್ಣಾವಧಿ ಕೆಡೆಟ್ ಇನ್ಸಸ್ಟ್ರಕ್ಟರ್ ಆಗಿ ಸೇವೆ ಸಲ್ಲಿಸಿದ ತರುವಾಯ, ರಾಷ್ಟ್ರೀಯ ಕೆಡೆಟ್ ದಳದಿಂದ ಬಿಡುಗಡೆ ಮಾಡಿದ ಅಭ್ಯರ್ಥಿಯ ಸಂದರ್ಭದಲ್ಲಿ, ಹಾಗೆ ಕೆಡೆಟ್ ಇನ್ಸಸ್ಟ್ರಕ್ಟರ್ ಆಗಿ ಆತನು ಸೇವೆ ಸಲ್ಲಿಸಿರುವಷ್ಟು ವರ್ಷಗಳು.

(ಎಫ್) ರಾಜ್ಯ ಸರಕಾರ ಪ್ರಾಯೋಜಿಕ ಗ್ರಾಮೀಣ ಕೈಗಾರೀಕರಣ ಯೋಜನೆಯಲ್ಲಿ ನೇಮಕಗೊಂಡ ಗ್ರಾಮ ಸಮೂಹ ಇನ್ಸಪೆಕ್ಟರ್ ಆಗಿ ಆತನು ಸೇವೆ ಸಲ್ಲಿಸಿರುವಷ್ಟು ವರ್ಷಗಳು.

(ಜಿ) ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಧಾರಣ ಮಾಡಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ ಅಂಥ ಹುದ್ದೆಯನ್ನು ಆತನು ಧಾರಣ ಮಾಡಿರುವಷ್ಟು ಅಥವಾ ಮಾಡಿದ್ದಷ್ಟು ವರ್ಷಗಳು ಅಥವಾ 05 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಎಚ್) ಜೀತ ಕಾರ್ಮಿಕನಾಗಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ 10 ವರ್ಷಗಳು.

6 <u>**ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಶುಲ್ಕ:**</u>

| ಕ್ರಮ ಸಂಖ್ಯೆ | ಮೀಸಲಾತಿ ವರ್ಗ | ಶುಲ್ಕ | ಪಾವತಿಸುವ ವಿಧಾನ |
|---|---|---|---|
| 1 | ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ಎಲ್ಲಾ ಮಹಿಳಾ ಅಭ್ಯರ್ಥಿಗಳಿಗೆ | ರೂ.100-00 | ಆನ್‌ಲೈನ್/ ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್/ ಚಲನ್ ಇತ್ಯಾದಿಗಳ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಆನ್‌ಲೈನ್ ಮೂಲಕ ಜಮಾ ಮಾಡತಕ್ಕದ್ದು. |
| 2 | ಸಾಮಾನ್ಯ/ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ | ರೂ.200-00 | |
| 3 | ಬ್ಯಾಂಕ್ ಶುಲ್ಕ ಪ್ರತ್ಯೇಕ | | |

7 <u>**ಆಯ್ಕೆ ವಿಧಾನ:**</u>

ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವೆನ್ಯೂ ಸಬಾರ್ಡಿನೇಟ್ ಬ್ರ್ಯಾಂಚ್) (ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳು 2008 ರನ್ವಯ ಅರ್ಹತೆ (ಮೆರಿಟ್) ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಲಾಗುವದು.

8 **ಅರ್ಜಿ ನಮೂನೆ, ವಿಳಾಸ ಹಾಗೂ ಅರ್ಜಿ ಸಲ್ಲಿಸುವ ವಿಧಾನ:-**

1) ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ (Online) ಮೂಲಕವೇ ವೆಬ್‌ಸೈಟ್ http://dharwad-va.kar.nic.in ಮುಖಾಂತರ ಸಲ್ಲಿಸುವುದು. ಆನ್‌ಲೈನ್ (Online) ಅರ್ಜಿಯು ದಿನಾಂಕ 05-08-2019 ರಿಂದ ಲಭ್ಯವಿರುತ್ತದೆ ಮತ್ತು ಕೊನೆಯ ದಿನಾಂಕ 04-09-2019ರ ಸಂಜೆ 5-30 ಗಂಟೆಯವರೆಗೆ ಮಾತ್ರ ಲಭ್ಯವಾಗುವುದು. ಆನ್‌ಲೈನ್ (Online) ಹೊರತುಪಡಿಸಿ ಇತರೆ ಯಾವುದೇ ವಿಧದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

2) ಕಂಪ್ಯೂಟರ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿದ ತರುವಾಯ ಅಭ್ಯರ್ಥಿಯು ವೆಬ್‌ಸೈಟ್‌ನಲ್ಲಿರುವ "ಎಸ್‌ಬಿಐ ಕಲೆಕ್ಟ್" ಲಿಂಕ್ ಮುಖಾಂತರ ಅರ್ಜಿ ಶುಲ್ಕ ಪಾವತಿಸುವುದು.

3) ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಎಸ್.ಬಿ.ಐ. ಶಾಖೆಯಲ್ಲಿ ದಿನಾಂಕ 05-09-2019 ರಂದು ಪಾವತಿಸಲು ಅಂತಿಮ ದಿನಾಂಕವಾಗಿರುತ್ತದೆ. ತದನಂತರ ಅರ್ಜಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.

4) ಆನ್‌ಲೈನ್ ಮೂಲಕ ಭರ್ತಿ ಮಾಡಲಾದ ಅರ್ಜಿಯಲ್ಲಿರುವ ಮಾಹಿತಿ ದಾಖಲೆ ಹಾಗೂ ಈ ಕೆಳಗಿನ ದಾಖಲೆಗಳೊಂದಿಗೆ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾದ ನಂತರ ಆಯ್ಕೆಯಾದ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಪಡಿಸತಕ್ಕದ್ದು.

5) (1) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳು

(2) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ (ಕ್ಯುಮುಲೇಟಿವ್ ರಿಕಾರ್ಡ) ದಾಖಲೆಯ ಉದ್ಧೃತ ಭಾಗ

(3) ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗೆಗಿನ ಪ್ರಮಾಣಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)

(4) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಗಳ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)

(5) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು ನಮೂನೆ-2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

(6) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

(7) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

(8) ಯೋಜನೆಗಳಿಂದ ನಿರಾಶ್ರಿತರಾದ ಬಗ್ಗೆ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

(9) ವಿಧವೆಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ

(10) ಮೀಸಲಾತಿ ಕೋರಿದ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಅವರು ಅಂಥವುಗಳ ಮೀಸಲಾತಿಗೆ ಅನರ್ಹರಾಗಿರುತ್ತಾರೆ.

9 **ವಿಶೇಷ ಸೂಚನೆಗಳು:**

(1) ಅಭ್ಯರ್ಥಿಗಳಿಗೆ **ಕನ್ನಡ ಭಾಷಾ ಜ್ಞಾನದ** ಅವಶ್ಯಕತೆ ಕಡ್ಡಾಯವಾಗಿರುತ್ತದೆ.

(2) ಕರ್ನಾಟಕ ನಾಗರಿಕ ಸೇವಾ (ಕಂಪ್ಯೂಟರ ಲಿಟರೆಸಿ ಟೆಸ್ಟ್) ನಿಯಮಗಳು, 2012ರ ನಿಯಮ 2 ರಡಿ ನಿಗದಿಪಡಿಸಿರುವಂತೆ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳು, ಸರಕಾರದವರು ನಡೆಸಲಾದ ಅಥವಾ ಸರಕಾರದ ಅನುಮೋದಿತ ಏಜೆನ್ಸಿಯವರು ತೆಗೆದುಕೊಳ್ಳಲಾದ ಕಂಪ್ಯೂಟರ ಲಿಟರೆಸಿ ಟೆಸ್ಟ್‌ನಲ್ಲಿ ಪ್ರತಿಶತ 60 ಕ್ಕಿಂತ ಕಡಿಮೆ ಇಲ್ಲದಷ್ಟು ಅಂಕ ಪಡೆದು ಪಾಸಾದ ಬಗ್ಗೆ ಪ್ರಮಾಣ ಪತ್ರವನ್ನು ಅಭ್ಯರ್ಥಿಯು ಹುದ್ದೆಗೆ ಆಯ್ಕೆಗೊಂಡು ಸೇವೆಗೆ ಹಾಜರಾದ ದಿನಾಂಕದಿಂದ 2 ವರ್ಷಗಳ ಅರ್ಹತಾ ಅವಧಿಯೊಳಗಾಗಿ ಹಾಜರಪಡಿಸುವುದು.

(3) ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(4) ಈ ಅಧಿಸೂಚನೆಯನ್ವಯ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಅಂಥವರು ಧಾರವಾಡ ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರಬೇಕು.

(5) ಅಭ್ಯರ್ಥಿಗಳು ಆಯ್ಕೆ ಬಗ್ಗೆ ಶಿಫಾರಸ್ಸುಗಳನ್ನು ಮಾಡಿದರೆ ಅಂಥವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(6) ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕು ಆಯ್ಕೆ ಪ್ರಾಧಿಕಾರಿಗಳಿಗೆ ದತ್ತವಾಗಿರುತ್ತದೆ.

(7) ಆಯ್ಕೆ ಪ್ರಾಧಿಕಾರವು ಗ್ರಾಮಲೆಕ್ಕಿಗರ ಹುದ್ದೆಗಳ ಭರ್ತಿ ಮಾಡುವ ವಿಚಾರ ಕುರಿತು ಪೂರ್ಣ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

(8) ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಆಯ್ಕೆ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು, ಧಾರವಾಡ ಇವರು ಕಾಯ್ದಿರಿಸಿಕೊಂಡಿದ್ದಾರೆ.

(9) ಸರಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ನೇಮಕಾತಿ ಪ್ರಾಧಿಕಾರ/ ಇಲಾಖಾ ಮುಖ್ಯಸ್ಥರಿಂದ ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು ಹಾಗೂ ತಮ್ಮ ಇಲಾಖಾ ಮುಖ್ಯಸ್ಥರು ನೀಡಿರುವ ನಿರಾಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು.

(10) ತಪ್ಪು ಮಾಹಿತಿ ಒದಗಿಸಿರುವ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಿರುವುದಿಲ್ಲ.

(11) ನೇಮಕಾತಿ ಪ್ರಕ್ರಿಯೆ ಪ್ರಾರಂಭದ ದಿನಾಂಕದಿಂದ ನೇಮಕಾತಿ ಆದೇಶ ಹೊರಡಿಸುವವರೆಗೆ ಅಭ್ಯರ್ಥಿಗಳಿಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ. ಅಭ್ಯರ್ಥಿಗಳು ಆನ್‌ಲೈನ್‌ದಲ್ಲಿ (online) ಮಾಹಿತಿಯನ್ನು ಪಡೆದು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರಾಗತಕ್ಕದ್ದು.

(12) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದ ಬಗ್ಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು (ಅಧ್ಯಕ್ಷರು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರವೇ ನೇಮಕಾತಿ ಆದೇಶ ನೀಡಲಾಗುವುದು.

(13) ಆಯ್ಕೆಯು ಸರಕಾರದಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.

(14) ಅರ್ಜಿಯಲ್ಲಿ ತಪ್ಪು / ಸುಳ್ಳು ಮಾಹಿತಿ ನೀಡಿ ಅಥವಾ ಖೊಟ್ಟಿ ಪ್ರಮಾಣ ಪತ್ರಗಳನ್ನು ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳ ನೇಮಕಾತಿಯನ್ನು ವಜಾಗೊಳಿಸುವುದಲ್ಲದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

(15) ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿ ಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

(16) ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದಲ್ಲಿ ಮೀಸಲಾತಿಗನುಗುಣವಾಗಿ ಪರಿಶೀಲನಾ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸದರ ಪಟ್ಟಿಯ ಪರಿಶೀಲನಾ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸದರ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ನಿಗದಿತ ದಿನಾಂಕದಂದು ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಹಾಜರಾಗಬೇಕಾಗಿರುತ್ತದೆ.

(17) ನಿಗದಿತ ದಿನಾಂಕದಂದು ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ಅನರ್ಹಗೊಳ್ಳುತ್ತಾರೆ ಮತ್ತು ಪರಿಶೀಲನಾ ಪಟ್ಟಿಯ ಅಭ್ಯರ್ಥಿಗಳಿಗೆ ಯಾವುದೇ ಪ್ರತ್ಯೇಕ ಸೂಚನಾ ಪತ್ರವನ್ನು ಈ ಕಾರ್ಯಾಲಯದಿಂದ ಕಳುಹಿಸುವುದಿಲ್ಲ.

(18) ನೇಮಕಾತಿ ಹೊಂದಿದ ಅಭ್ಯರ್ಥಿಗಳು 2 ವರ್ಷಗಳ ಪರಿವೀಕ್ಷಣಾ ಅವಧಿ ಪೂರೈಸುವುದು ಕಡ್ಡಾಯವಾಗಿರುತ್ತದೆ.

10 **ಜಾತಿ/ಮೀಸಲಾತಿ ಪ್ರಮಾಣ ಪತ್ರಗಳು:**

ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದ ಮೀಸಲಾತಿ) (ತಿದ್ದುಪಡಿ) ನಿಯಮಗಳು, 2000 ರನ್ವಯ ಸಂಬಂಧಪಟ್ಟ ರೆವೆನ್ಯೂ ಪ್ರಾಧಿಕಾರದಿಂದ ಪಡೆಯಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ, ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು.

- ಪ.ಜಾ./ಪ.ಪಂ. ಅಭ್ಯರ್ಥಿಗಳು ನಮೂನೆ-"ಡಿ" ರಲ್ಲಿ
- ಪ್ರವರ್ಗ-I ರ ಅಭ್ಯರ್ಥಿಗಳು ನಮೂನೆ-"ಇ" ರಲ್ಲಿ
- ಪ್ರವರ್ಗ-2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ- "ಎಫ್" ರಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

11 **ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು:**

ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿಡಲಾದ ಹುದ್ದೆಗಳಿಗೆ ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲದಾರರವರು ನಿಗದಿತ ನಮೂನೆಯಲ್ಲಿ ನೀಡಿದ ಪ್ರಮಾಣ ಪತ್ರ ಪಡೆದುಕೊಂಡಿರಬೇಕು.

12 **ಅಂಗವಿಕಲ ವಿದ್ಯಾರ್ಥಿಗಳು:**

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1-ಎ) ರನ್ವಯ ರಾಜ್ಯ ಸಿವಿಲ್ ಸೇವೆಯಲ್ಲಿನ "ಸಿ" ವೃಂದದ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇ.5 ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ.

(1) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್.52.ಎಸ್ಆರ್ಆರ್.99 ದಿನಾಂಕ 29-11-2002

(2) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್.54.ಎಸ್ಆರ್ಆರ್.2012 ದಿನಾಂಕ 23-06-2012 ರನ್ವಯ,-

(ಎ) ಕುಷ್ಠರೋಗದಿಂದ ಗುಣಮುಖರಾದವರು (Leprosy cured)

(ಬಿ) ಮಾನಸಿಕ ಅಸ್ವಸ್ಥತೆ (Mentally ill)

(ಸಿ) ಶ್ರವಣದೋಷವುಳ್ಳವರು (Hearing Impaired)

(ಡಿ) ವಿಕಲಚೇತನ ಉಳ್ಳವರು (Locomotor Disability) ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ:128:ಸೇನೆನಿ:2005 ದಿನಾಂಕ 19-11-2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಹೊಂದಿರಬೇಕು ಮತ್ತು ಈ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದೊಳಗೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

13 ಗ್ರಾಮೀಣ ಅಭ್ಯರ್ಥಿಗಳು :

ಗ್ರಾಮೀಣ ಅಭ್ಯರ್ಥಿ ಎಂದರೆ, ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರಿಯಿಂದ ಧೃಡೀಕೃತ ಗ್ರಾಮೀಣ ಪ್ರಮಾಣ ಪತ್ರವನ್ನು ಪಡೆದಿರಬೇಕು. ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ರ ಪ್ರಮಾಣ ಪತ್ರ ಮತ್ತು ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿಸಿದ ತಹಶೀಲದಾರರವರಿಂದ ಪಡೆಯಬೇಕು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರಿರುವ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ ಹಾಗೂ 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ನಿಗದಿತ ಪ್ರಾಧಿಕಾರಿಗಳಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಮೇಲು ರುಜು ಮತ್ತು ಮೊಹರು ಹಾಕಿಸಿಕೊಂಡಿರಬೇಕು.

ಗ್ರಾಮೀಣ ಮೀಸಲಾತಿ ಕೋರುವ ಪ.ಜಾ/ಪಂಪಂ/ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.

14 ಕನ್ನಡ ಮಾಧ್ಯಮ ಅಭ್ಯರ್ಥಿಗಳು:

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್/71/ಎಸ್ಆರ್ಆರ್/2001 ದಿ:24-10-2002 ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ (9)(1)(ಸಿ)ರ ಅನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮ ದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮತ್ತು ಮೊಹರು ಹಾಕಿಸಿಕೊಂಡಿರಬೇಕು.

15 ಅರ್ಹತಾ ಷರತ್ತುಗಳು:-

(ಎ) ಅಭ್ಯರ್ಥಿಯು ಭಾರತೀಯ ನಾಗರೀಕನಾಗಿರತಕ್ಕದ್ದು.

(ಬಿ) ಅಭ್ಯಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

(ಸಿ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

16 ಇತರೆ ಸೂಚನೆಗಳು:

(1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

(2) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ದಿನಾಂಕದ ಮಾರನೆಯ ದಿನವು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

(3) ಅಧಿಸೂಚನೆಯೊಂದಿಗೆ ಅಳವಡಿಸಲಾದ ನಿಗದಿತ ನಮೂನೆಗಳಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ಎಲ್ಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಪಡೆದುಕೊಂಡು, ಅರ್ಹತೆಯನ್ನು ಹೊಂದಿರಬೇಕು.

(4) ಇಬ್ಬರು ಗಣ್ಯ ವ್ಯಕ್ತಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ ಹೊಂದಿರತಕ್ಕದ್ದು.

(5) ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಈ ಕೆಳಕಂಡಂತೆ ಸಂಪರ್ಕಿಸತಕ್ಕದ್ದು.

1) ಇ-ಮೇಲ್ : va2019.dharwad@gmail.com
2) ದೂರವಾಣಿ ಸಂಖ್ಯೆ : 0836-2233840
3) ಫ್ಯಾಕ್ಸ್ ನಂಬರ : 0836-2747102

ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರಿ ಹಾಗೂ
ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ

ಪ್ರತಿಗಳು : **ಗೌರವಪೂರ್ವಕ ಸಲ್ಲಿಸಿದೆ.**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟಾವರ್, ಬೆಂಗಳೂರು
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ

ಪ್ರತಿಗಳು : ಅಭಿನಂದನೆಗಳೊಂದಿಗೆ ಸೂಕ್ತ ಕ್ರಮಕ್ಕೆ

1. ಉಪ ನಿರ್ದೇಶಕರು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ ಇವರಿಗೆ

   2/–ಇದರ ಲಗ್ತ ಇಟ್ಟ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಪ್ರಕಟಿತ ಅಧಿಸೂಚನೆಯ 50 ಪ್ರತಿಗಳನ್ನು ಈ ಕಛೇರಿಗೆ ಕಳಿಸಲು ಕೋರಿದೆ.
2. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಅಭಿನಂದನೆಗಳೊಂದಿಗೆ ಸೂಚನಾ ಫಲಕಕ್ಕೆ ಪ್ರಕಟಿಸುವ ಕುರಿತು ಕೋರಿದೆ.
3. ಉಪವಿಭಾಗಾಧಿಕಾರಿಗಳು, ಧಾರವಾಡ ಇವರಿಗೆ ಕಛೇರಿ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಿಸುವುದು.
4. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ
5. ಜಿಲ್ಲಾ ಉದ್ಯೋಗಾಧಿಕಾರಿಗಳು, ಉದ್ಯೋಗ ವಿನಿಮಯ ಕೇಂದ್ರ, ಹುಬ್ಬಳ್ಳಿ
6. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ಧಾರವಾಡ ಇವರಿಗೆ

   2/– ಲಗತ್ತ ಇರುವ ಅಧಿಸೂಚನೆಯನ್ನು ನಿಗದಿತ ದಿನಾಂಕದೊಳಗಾಗಿ ರಾಜ್ಯ ಮಟ್ಟದ 2 ದಿನಪತ್ರಿಕೆಗಳಲ್ಲಿ (ಅದರಲ್ಲಿ ಒಂದು ಕನ್ನಡ ದಿನಪತ್ರಿಕೆಯಲ್ಲಿ) ಪ್ರಕಟಿಸುವ ಕುರಿತು ಕ್ರಮ ಜರುಗಿಸಲು ಕೋರಿದೆ.
7. ಜಿಲ್ಲೆಯ ಎಲ್ಲ ತಹಶೀಲದಾರರಿಗೆ, ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ, ವರದಿ ಸಲ್ಲಿಸಲು ಸೂಚಿಸಿದೆ.
8. ಕಛೇರಿಯ ಸೂಚನಾ ಫಲಕಕ್ಕೆ
9. ಕಡತಕ್ಕೆ

DEPUTY COMMISSIONER DHARWAD

ಕಾರ್ಯದರ್ಶಿಗಳು,
ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರಿ ಹಾಗೂ
ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ,
ಧಾರವಾಡ

(ಆದೇಶ ಸಂಖ್ಯೆ ಎಸ್.ಡಬ್ಲ್ಯು.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08–02–2000 ಕ್ಕೆ ಸಂಬಂಧಿಸಿದಂತೆ)

## ನಮೂನೆ –ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

———— ರಾಜ್ಯದ /ಕೇಂದ್ರಾಡಳಿತ ಪ್ರದೇಶದ ———— ಜಿಲ್ಲೆಯ /ವಿಭಾಗದ ——— ಗ್ರಾಮ /ಪಟ್ಟಣದ ನಿವಾಸಿಯಾದ ಶ್ರೀ/ಶ್ರೀಮತಿ : ———— ಎಂಬುವವರ ಮಗ/ಮಗಳಾದ ಶ್ರೀ/ಶ್ರೀಮತಿ ——— ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ತಿದ್ದುಪಡಿ) ಆದೇಶ 1956, ಮುಂಬೈ ರಾಜ್ಯ ಪುನರ್ರಚನಾ ಅಧಿನಿಯಮ , 1960 ಪಂಜಾಬ್ ರಾಜ್ಯ ಪುನರ್ರಚನಾ ಅಧಿನಿಯಮ, 1966 ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ ಪುನರ್ರಚನಾ ಅಧಿನಿಯಮ, 1971 ರ ಮೂಲಕ ತಿದ್ದುಪಡಿಯಾದಂತೆ)

- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ 1976 ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ) ಅನುಸೂಚಿತ ಬುಡಕಟ್ಟುಗಳ ಆದೇಶ, 1959
- ಸಂವಿಧಾನ (ದಾದರ್ ಮತ್ತು ನಾಗರ್ ಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ ) ಅನುಸೂಚಿತ ಜಾತಿಗಳ ಆದೇಶ 1964
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
- ಸಂವಿಧಾನ (ಗೋವ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

ಶ್ರೀ/ಶ್ರೀಮತಿ/ಕುಮಾರಿ * ———— ಮತ್ತು ಅಥವಾ ಅವನ /ಅವಳ ಕುಟುಂಬವು ——— ರಾಜ್ಯ / ಕೇಂದ್ರಾಡಳಿತ ಪ್ರದೇಶದ ———— ಜಿಲ್ಲಾ/ವಿಭಾಗದ ———— ಗ್ರಾಮ/ ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ..............................

ತಹಸೀಲ್ದಾರ್ ....................

ಸ್ಥಳ

ದಿನಾಂಕ:

ಪದನಾಮ: ಕಛೇರಿ ಮೊಹರಿನೊಂದಿಗೆ

ರಾಜ್ಯ/ಕೇಂದ್ರಾಡಳಿತ ಪ್ರದೇಶ *

ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ/ಹೊಡೆದು ಹಾಕಿ

ಸೂಚನೆ : ಇಲ್ಲಿ ಉಪಯೋಗಿಸುವ " ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ 1950 ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ : ಬಿಸಿ/12028/2/76 ಎಸ್.ಸಿ.ಟಿ–I ಗೃಹಮಂತ್ರಾಲಯದ ಅನುಸಾರವಾಗಿ ಅಂಥ ಪ್ರಮಾಣ ಪತ್ರ ನೀಡಲು ಸಕ್ರಮವಾಗಿರುವುದಕ್ಕಾಗಿ ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ –13/2/74 ಇ.ಎಸ್.ಟಿ (ಎಸ್.ಸಿ.ಟಿ) ದಿನಾಂಕ 5ನೇ ಆಗಸ್ಟ್ 1975 ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು ತನ್ನ ಖಾಯಂ ವಾಸಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

(ಆದೇಶ ಸಂಖ್ಯೆ :ಎಸ್.ಡಬ್ಲ್ಯು.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08–02–2000 ಕ್ಕೆ ಸಂಬಂಧಿಸಿದಂತೆ)

2

<u>ನಮೂನೆ –ಇ</u>

(ನಿಯಮ 3ಎ (2) (3) ನೋಡಿ)

(ಹಿಂದುಳಿದ ವರ್ಗ ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ)

——————————ಗ್ರಾಮ/ ಪಟ್ಟಣ /ನಗರದ ನಿವಾಸಿಯಾದ ಶ್ರೀ/ಶ್ರೀಮತಿ——————————ಇವರು ಹಿಂದುಳಿದ ವರ್ಗಗಳ (ಪ್ರವರ್ಗ)——————ಜಾತಿಯ ——————————ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ತಹಸೀಲ್ದಾರ್

ಸ್ಥಳ :

——————————ತಾಲ್ಲೂಕು

ದಿನಾಂಕ :

ಕಛೇರಿಯ ಮೊಹರು

---

(ಆದೇಶ ಸಂಖ್ಯೆ :ಎಸ್.ಡಬ್ಲ್ಯೂ.ಡಿ. 132 ಎಸ್.ಎ.ಡಿ. 97 ಬೆಂಗಳೂರು ದಿನಾಂಕ 08–02–2000 ಕ್ಕೆ ಸಂಬಂಧಿಸಿದಂತೆ)

## ನಮೂನೆ – ಎಫ್

(ನಿಯಮ 3ಎ (2) (3) ನ್ನು ನೋಡಿ)

(ಹಿಂದುಳಿದ ವರ್ಗ –2ಎ, 2ಬಿ, 3ಎ, 3ಬಿ ಗಳಿಗೆ ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ)

------------------------------ ರಲ್ಲಿ ವಾಸವಗಿರುವ ಶ್ರೀ/ ಶ್ರೀಮತಿ --------------

ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ ------------------------------

ಇವರು ಮತ್ತು ಆತನ/ಆವಳ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ 30–03–2002 ರಲ್ಲಿ ನಿರ್ದಿಷ್ಟ ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ / ತಾಯಿ/ ಪೋಷಕರಾಗಲಿ/ ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1 ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ; ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 11200 –21600/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು ಅಥವಾ

ಆತನ/ಆಕೆಯ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು: ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ/ ಆಕೆಯ ತಂದೆ/ ತಾಯಿ/ ಪೋಷಕರು/ ಪತ್ನಿ/ ಪತಿಯು ಅಥವಾ ಇವರಿಬ್ಬರೂ 10 ಯುನಿಟ್ ಗಿಚತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2002 ದಿನಾಂಕ : 30–03–2002 ರ ಅನವಯ ಶ್ರೀ/ ಶ್ರೀಮತಿ/ಕುಮಾರಿ ------------------------------ಇವರು ---------------- ಜಾತಿಗೆ ಸೇರಿದ -------- ಉಪಜಾತಿಯವರಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ : ಎಸ್ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30–03–2002 ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ ------------ (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ

ದಿನಾಂಕ:

ತಹಶೀಲ್ದಾರ್

-------------- ತಾಲ್ಲೂಕು

ಕಛೇರಿಯ ಮೊಹರು

## ನಮೂನೆ -1

ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿಮಾಡಬೇಕಾದ ನಮೂನೆ)

ತಹಶೀಲ್ದಾರ್

----------------ತಾಲ್ಲೂಕು

----------------ಜಿಲ್ಲೆ

ಮಾನ್ಯರೆ,

ಶ್ರೀ/ಶ್ರೀಮತಿ------------------------------ ಎಂಬುವವರ ಮಗ/ಮಗಳು/ಹೆಂಡತಿ/ಗಂಡ ---------------- ಆದ ನಾನು ಮೇಲುಸ್ತರದಲ್ಲಿ (Creamy layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

| | | | | |
|---|---|---|---|---|
| 1. | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | | | |
| 2. | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ | ತಾಲ್ಲೂಕು | ಜಿಲ್ಲೆ |
| | | | | |
| 3 | ಅಭ್ಯರ್ಥಿಯ ಹುಟ್ಟಿದ ದಿನಾಂಕ, ವಯಸ್ಸು , ಹುಟ್ಟಿದ ಸ್ಥಳ | | | |
| 4 | ಅಭ್ಯರ್ಥಿಯ ತಂದೆ/ ತಾಯಿ/ ಪೋಷಕ/ ಹೆಂಡತಿ/ಗಂಡ ಹೆಸರು ಮತ್ತು ಉದ್ಯೋಗ (ಸರ್ಕಾರಿ/ಅರೆಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ) | | | |
| 5 | ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ (ಸ್ಪಷ್ಟವಾಗಿ ನಮೂದಿಸಿ) | | | |
| 6 | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | | | |
| 7 | ಅಭ್ಯರ್ಥಿಯ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರ | | | |
| 8 | ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ ತಾಯಿ/ಪೋಷಕ(ತಂದೆ/ತಾಯಿ ಜೀವಂತವಾಗಿರದಿದ್ದಲ್ಲಿ)/ಹೆಂಡತಿ/ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ<br>1. ವೇತನ (ವೇತನ ಶ್ರೇಣಿ)<br>2. ಜಮೀನಿನ ವಿವರ<br>3. ಇತರೆ ಮೂಲಗಳು | | | |
| 9 | ಆದಾಯ ತೆರಿಗೆ ಪಾವತಿದಾರರೆ? | | | |
| 10. | ಸಂಪತ್ತು ತೆರಿಗೆ ಪಾವತಿದಾರರೇ? | | | |

| | | |
|---|---|---|
| 11. | ಮಾರಾಟ ತೆರಿಗೆ ಪಾವತಿದಾರರೇ? | |

## ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ:

ತಮ್ಮ ವಿಧೇಯ

ದಿನಾಂಕ:

ಅಭ್ಯರ್ಥಿಯ ಸಹಿ

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತಾ , ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ಪೋಷಕರು (ತಂದೆತಾಯಿ ಜೀವಂತರಾಗಿರದಿದ್ದಲ್ಲಿ)

/ಹೆಂಡತಿ/ಗಂಡ ಇವರ ಸಹಿ

## ಇಬ್ಬರು ಸ್ಥಳೀಯ ಸಾಕ್ಷಿಗಳು

ಅಭ್ಯರ್ಥಿಯ ಮತ್ತು ತಂದೆ/ ತಾಯಿ/ಪೋಷಕರು /ಗಂಡ/ ಹೆಂಡತಿ ಇವರನ್ನು ಹಾಗೂ ಇವರ ಸಹಿಗಳನ್ನು ನಾವು ಗುರುತಿಸುತ್ತೇವೆ.

ಸಾಕ್ಷಿಗಳ ಸಹಿ
(ಪೂರ್ಣ ವಿಳಾಸದೊಂದಿಗೆ) : 1

: 2

## ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ------------------------------ ಇವರ ಮಗ ,ಮಗಳು , ಹೆಂಡತಿ, ಗಂಡ ಶ್ರೀ/ಶ್ರೀಮತಿ/ಕುಮಾರಿ ------------------------------ ಎಂಬುವವರು --------------- ಜಿಲ್ಲೆಯ ---------ವಿಭಾಗ -------------------ಗ್ರಾಮ / ಪಟ್ಟಣ /ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ ------------------------------ಇರವ ತಂದೆ, ತಾಯಿ, ಪೋಷಕರು ಇವರು ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯೂ. 251 ಬಿ.ಸಿ.ಎ. 94.ದಿನಾಂಕ 31/01/1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:

ತಹಶೀಲ್ದಾರ್

ದಿನಾಂಕ:

-----------------ತಾಲ್ಲೂಕು

ಸೂಚನೆಗಳು:

1. ಇದರಲ್ಲಿ ಉಪಯೋಗಿಸಲಾಗಿರುವ ಸಾಮಾನ್ಯ ನಿವಾಸಿ ಎಂಬ ಪದವು 1950 ರ ಜನತಾ ಪ್ರಾತಿನಿಧ್ಯ ಕಾಯಿದೆಯ 20 ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.
2. ಪರಿಶೀಲನಾ ಪ್ರಮಾಣಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ. 251 ಬಿ.ಸಿ.ಎ. 95 .ದಿನಾಂಕ 31/01/1995 ರನ್ವಯ ಮೇಲುಸ್ತರ (Creamy layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪತ್ರ ನೀಡತಕ್ಕದ್ದು.

ನಮೂನೆ-2

## ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಪ್ರಮಾಣ ಪತ್ರ

(ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಎ.ಆರ್. 96 ಎಸ್.ಆರ್.ಆರ್. 2005 ಬೆಂಗಳೂರು ದಿನಾಂಕ 10-08-2005)

ಶ್ರೀ ______________________ ರವರ ಮಗ /ಮಗಳು ಶ್ರೀ/ಪತ್ನಿ/ಶ್ರೀ ಶ್ರೀಮತಿ/ಕುಮಾರಿ ______________________ ಜಿಲ್ಲೆ ______________ ತಾಲ್ಲೂಕು ______________ ಗ್ರಾಮದಲ್ಲಿ ______________________ ವಾಸವಾಗಿರುವ ಇವರು ಒಂದನೇ ತರಗತಿಯಿಂದ ______________ ತರಗತಿಯವರೆಗೆ ______________ ಜಿಲ್ಲೆ ______________ ತಾಲ್ಲೂಕು ______________ ಪಟ್ಟಣ ______________________ ______________ ಶಾಲೆಯಲ್ಲಿ ವ್ಯಾಸಂಗ ಮಾಡಿ ______________ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯ ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕದ ಪೌರ ನಿಗಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು

ಸಹಿ

ದಿನಾಂಕ:

ಮುಖ್ಯೋಪಾಧ್ಯಾಯರು

ಸ್ಥಳ:

ಮತ್ತು ಸಂಸ್ಥೆಯ ಮೊಹರು

ಮೇಲುರುಜು

ದಿನಾಂಕ:

ಕ್ಷೇತ್ರ ಶಿಕ್ಷಣ ಅಧಿಕಾರಿ

ಸ್ಥಳ:

ಕಛೇರಿಯ ಮೊಹರು

ಸರ್ಕಾರದ ಆದೇಶ ಸಂಖ್ಯೆ : ಸಿ. ಆ. ಸು. ಇ. 97 ಸಸೆನಿ 2002, ಬೆಂಗಳೂರು, ದಿನಾಂಕ : 22-11-2002.

## ನಮೂನೆ

## ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ---------------------------------------- ರವರ ಮಗ/ಮಗಳು/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ ------------------------------ ಜಿಲ್ಲೆ ------------------------------ ತಾಲ್ಲೂಕು -------------------- ಗ್ರಾಮ --------------- ವಾಸವಾಗಿರುವ ಇವರು ------ ತರಗತಿಯಿಂದ ------- ತರಗತಿಯವರೆಗೆ ------------ ಜಿಲ್ಲೆ ------- ತಾಲ್ಲೂಕು --------- ಪಟ್ಟಣ ------------------------ ಶಾಲೆಯಲ್ಲಿ ವ್ಯಾಸಂಗ ಮಾಡಿ ------- ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

(ಸಹಿ)

ಮುಖ್ಯೋಪಾಧ್ಯಾಯರು

------------- ಶಾಲೆ

ಮೇಲು ರುಜು

ಕ್ಷೇತ್ರ ಶಿಕ್ಷಣಾಧಿಕಾರಿ, ------------ ತಾಲ್ಲೂಕು

# ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿ

## ಪ್ರಮಾಣ ಪತ್ರ

ಶ್ರೀ/ಶ್ರೀಮತಿ------------------------------------------------ರವರ ಮಗ/ ಮಗಳು/ ಪತ್ನಿ ಶ್ರೀ/ಶ್ರೀಮತಿ-----------------------------------ರವರು ---------------ಜಿಲ್ಲೆ-----------------ತಾಲ್ಲೂಕು ------------------ಗ್ರಾಮದಲ್ಲಿ ವಾಸವಾಗಿರುವ ಇವರು/ಇವರ ಕುಟುಂಬದವರು ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು ----------------ಇಸವಿಯಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ.

1. ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು
2. ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೇ ಯೋಜನೆಯಿಂದ ವಾಸಿಸುತ್ತಿದ್ದ ಮನೆ.
3. ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿ
4. ಇತರೆ ಇನ್ನಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು

(ಅನ್ವಯವಾಗುವ ಐಟಂ ಮಾತ್ರ ಪ್ರಮಾಣ ಪತ್ರದಲ್ಲಿ ನಮೂದಿಸತಕ್ಕದ್ದು )

ತಹಸೀಲ್ದಾರ್

---------------- ತಾಲ್ಲೂಕು

ಅನುಬಂಧ - II

## ರಾಜ್ಯ ಸರ್ಕಾರ/ಕೇಂದ್ರ ಸರ್ಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ . . . . . . . . . . . . . . . . . . . . . . . ರವರು ರಾಜ್ಯ/ಕೇಂದ್ರ ಸರ್ಕಾರದಲ್ಲಿ . . . . . . . . . . . . . . (ಪದನಾಮ) . . . . . . . . . . . . . . . ಹುದ್ದೆಯನ್ನು ದಿನಾಂಕ: . . . . . . . . . . . . ಇಲಾಖೆಯಲ್ಲಿ ಖಾಯಂ/ತಾತ್ಕಾಲಿಕ . . . . . . . . ರವರೆಗೆ ಹೊಂದಿರುವರು. ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದು, ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅವರಿಗೆ ಅನುಮತಿ ನೀಡಲಾಗಿದೆ. ಈ ಹುದ್ದೆಗೆ ಇವರು

ಸ್ಥಳ:
ದಿನಾಂಕ:

ನೇಮಕಾತಿ ಪ್ರಾಧಿಕಾರದ ಸಹಿ:
( ಇಲಾಖೆ, ಹೆಸರು ಮತ್ತು ಮೊಹರಿನೊಂದಿಗೆ )

## Certificate to be furnished by the State/Central Government Servant

Certified that Sri/Smt. . . . . . . . . . . . . . . . . . . . . . . . . . . . . . . . . . . . . . . . . . . . . . . . . holds a permanent/temporary post under the State/Central Government as . . . . . . . . . . . . . . . ( Designation) in the department of . . . . . . . . . from . . . . . . . . . . having been appointed there in under the rules of recruitment. He/She is permitted to apply for the said post.

Signature of the Authority
(Authority of the Department with
Name & Seal )

## ಸ್ವೀಕೃತಿ

ಅರ್ಜಿ ಸಂಖ್ಯೆ:

ಶ್ರೀ/ಶ್ರೀಮತಿ . . . . . . . . . . . . . . . . . . . . . . . . ರವರಿಂದ ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಹಾಗೂ ಅರ್ಜಿ ಶುಲ್ಕ ರೂ. ಡಿ.ಡಿ. ಸಂಖ್ಯೆ: . . . . . . . . . . . ದಿನಾಂಕ: . . . . . . . . . . . ನ್ನು ಸ್ವೀಕರಿಸಿದೆ.

ಸ್ಥಳ:
ದಿನಾಂಕ:

ಸ್ವೀಕರಿಸಿದ ಅಧಿಕಾರಿಯ ಸಹಿ:
ಮೊಹರು

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 115 ಸನೆನಿ 2005, ದಿನಾಂಕ 19-11-2005

## CERTIFICATE FOR THE PERSONS WITH DISABILITIES

This is to certify that Sri / Smt / Kumari . . . . . . . . . . . . . . . . . . . . . . . . . . son / wife / daughter of Sri . . . . . . . . . . . . . . . . . . ... Age: . . . . . . . . . old Male / Female, Rgistration No. No. . . . . . . . . . . . . is in a case of . . . . . . . . . . . . . . . He / She is Physically Disabled / Visual Disabled / Speech and Hearing disabled and has . . . . . . . . . . . % ( . . . . . . . . . . . . . Percent) permanent (Physical impairment / Visual impairment / Speech and Hearing impairment) in relation to his / her . . . . . . . . . . . . . . . . . . . . . . .

Note:

1. This condition is progressive / non-progressive / likely to improve / not-likely to improve
2. Re-assessment is not recommended / is recommended after a period of . . . . . . . . months / years

*Strike out which is not applicable

(Recent Attested

Photograph showing

the disability

affixed here)

| | | |
|---|---|---|
| Sd/-<br>(Doctor)<br>(Seal) | Sd/-<br>(Doctor)<br>(Seal) | Sd/-<br>(Doctor)<br>(Seal) |

Countersigned by the
Medical Superintendent CMO/Head of
Hospital (with seal)

Signature / Thumb impression
of the disabled person.

GOVERNMENT OF KARNATAKA

DEPARTMENT OF SAINIK WELFARE AND RESETTLEMENT

Office of the Deputy Director
Department of Sainik Welfare & Resettlement
(Karnataka)

No.-----------------------------

Date:-----------------

## CERTIFICATE

This is to certify that Shri/Smt/Kum--------------------is an applicant for -------is the spouse /son/daughter of No---------Rank--------Name---------------------------- of Army/Navy/Air Force, who is an Ex-serviceman according to the definition laid down by the Minister of Defence, Government of India. He served from -------------to -----------------

The Ex-Serviceman had declared his home town in Karnataka at the time of entry into service as per records & hence eligible to avail reserved seats under Ex-Serviceman quota. His permanent home address at the time of entry into service was as under:

Home address before joining service:

--------------------------------------

--------------------------------------

Place:
Date:
Resettlement

Signature of the Deputy Director
Department of Sainik Welfare &

-----------------------------------District

OR

## CERTIFICATE

This is to certify that Shri/Smt/Kum---------------------is an applicant for -------in Karnataka is the spouse /son/daughter of No---------Rank--------Name---------------------- who died /disabled while in service according to the certificate issued by Defense Authority. He died / disabled on ---------------

Home address of the individual at the time of joining Defense Service as per the records is:

--------------------------------------

--------------------------------------

Place:
Date:
Resettlement

Signature of the Deputy Director
Department of Sainik Welfare &

--------------------------------

District